# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 243 | Pages. 2 | Date: 08-09-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 243 - ಪುಟಗಳು : 2 | 08-09-2026 | ಮಂಗಳವಾರ | Ph: 8762954248 | ದರ : ₹1


# ಫಲಾನುಭವಿಗಳ ನಿರಾಸಕ್ತಿ-ಬೇರೆಯವರಿಗೆ ಮನೆ

## ಸಚಿವ ಶಿವಲಿಂಗೇಗೌಡ ಹೇಳಿಕೆ | ಹೌಸಿಂಗ್ ಫಾರ್ ಆಲ್ ಯೋಜನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಮನೆ ನಿರ್ಮಿಸಿಕೊಂಡಿರುವ ಫಲಾನುಭವಿಗಳು ಮನೆಗಳಲ್ಲಿ ವಾಸ ಮಾಡದಿದ್ದರೆ ಅವರ ಆಯ್ಕೆಯನ್ನು ರದ್ದುಪಡಿಸಿ ಬೇರೆಯವರಿಗೆ ನೀಡಲಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಹೇಳಿದರು.



ನಗರದ ಸುಬ್ರಹ್ಮಣ್ಯ ಬೆಟ್ಟದ ತಪ್ಪಲಿನಲ್ಲಿ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ನಿರ್ಮಿಸಿರುವ ಗುಂಪು ಮನೆಗಳ 2ನೇ ಹಂತದ ವಿತರಣಾ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿ, ಆಯ್ಕೆಯಾಗಿರುವ ಫಲಾನುಭವಿಗಳು ತಮ್ಮ ಮನೆಗಳಲ್ಲಿ ವಾಸ ಮಾಡುತ್ತಿಲ್ಲದಿದ್ದರೆ ಅಂತವರಿಗೆ ನೋಟೀಸ್ ನೀಡಿ ಆದಾಗ್ಯೂ ಫಲಾನುಭವಿಗಳು ಬರದಿದ್ದರೆ ಆ ಮನೆಗಳನ್ನು ಅವಶ್ಯವಿರುವ ಬದಲಿ ಪಲಾನುಭವಿಗೆ ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ನಗರಸಭೆ ಪೌರಾಯುಕ್ತರಿಗೆ ಸೂಚಿಸಿದರು.

ಫಲಾನುಭವಿಯಿಂದ 1 ಲ.ರೂ., ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಸುಸಜ್ಜಿತ ಮನೆಗಳನ್ನು ನಿರ್ಮಿಸಲಾಗಿದೆ. ಶಾಶ್ವತ ಸೂರು ಒದಗಿಸಿದರೂ ನಿರಾಸಕ್ತಿ ತೋರುವುದು ಸರಿಯಲ್ಲ. ಈಗಾಗಲೇ ಆಯ್ಕೆಯಾಗಿರುವ ಮೊದಲ ಹಂತದ ಫಲಾನುಭವಿಗಳ ಪೈಕಿ ನೂರಕ್ಕೂ ಹೆಚ್ಚು ಪಲಾನುಭವಿಗಳು ತಮಗೆ ನಿಗದಿಯಾಗಿರುವ ಮನೆಗಳಲ್ಲಿ ವಾಸಿಸಲು ಇನ್ನೂ ಬಂದಿಲ್ಲ. ಮತ್ತೊಂದೆಡೆ ನಮಗೆ ಮನೆ ಕೊಡಿ ಎಂದು ನೂರಾರು ಮಂದಿ ನಿತ್ಯ ನಮ್ಮ ಮನೆ ಮತ್ತು ಕಚೇರಿಗೆ ಅಲೆಯುತ್ತಿದ್ದಾರೆ. ಮನೆಗೆ ಬರಲು ಇಷ್ಟವಿಲ್ಲದವರು ತಮ್ಮ ಹಕ್ಕುಪತ್ರವನ್ನು ವಾಪಾಸ್ ನೀಡಿದರೆ ಅವಶ್ಯವಿರುವ ಫಲಾನುಭವಿಗಳಿಗೆ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಆಯುಕ್ತರು ತಮ್ಮ ಬಿಲ್ ಕಲೆಕ್ಟರ್ ಮೂಲಕ ಫಲಾನುಭವಿಗಳ ಮನೆಗೆ ಖುದ್ದು ಭೇಟಿ ನೀಡಿ ಅವರ ಅಭಿಪ್ರಾಯ ಸಂಗ್ರಹಿಸಬೇಕು ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಎಂ.ಸಮೀವುಲ್ಲಾ ಮಾತನಾಡಿ, ಸಚಿವ ಕೆ.ಎಂ.ಶಿವಲಿಂಗೇಗೌಡರ ನಿರಂತರ ಹೋರಾಟದ ಫಲದಿಂದ ನೂರಾರು ಕುಟುಂಬಗಳು ಸ್ವಂತ ಸೂರಿನಲ್ಲಿ ಬದುಕು ಸಾಗಿಸುತ್ತಿವೆ. ಮತ್ತಷ್ಟು ಮನೆಗಳು ವಿತರಣೆಗೆ ಸಿದ್ಧವಾಗಿವೆ. ಸಾವಿರಾರು ಸಂಖ್ಯೆಯಲ್ಲಿ ಗುಂಪು ಮನೆಗಳು ನಿರ್ಮಾಣವಾಗುತ್ತಿರುವುದರಿಂದ ಮೂಲಸೌಕರ್ಯ ಕಲ್ಪಿಸಿಕೊಡಲು 11 ಕೋ.ರೂ. ಅನುದಾನ ಸಹ ಬಿಡುಗಡೆ ಮಾಡಲಾಗಿದೆ. ಈ ಬಡಾವಣೆಯು ಕೆಲವೇ ದಿನಗಳಲ್ಲಿ ರಾಜ್ಯದ ಮಾದರಿ ಬಡಾವಣೆಯಾಗುವುದರಲ್ಲಿ ಸಂದೇಹವಿಲ್ಲ. ಇದರ ಪ್ರಯೋಜನವನ್ನು ನಗರದ ವಸತಿ ರಹಿತರು ಪಡೆದುಕೊಳ್ಳುವ ಮೂಲಕ ಸ್ವಂತ ಮನೆಗಳನ್ನು ತಮ್ಮದಾಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಲಾಟರಿ ಮೂಲಕ ಫಲಾನುಭವಿಗಳ ಆಯ್ಕೆ ಮಾಡಲಾಯಿತು. ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಮಾಜಿ ಉಪಾಧ್ಯಕ್ಷ ಮನೋಹರ ಮೇಸ್ತ್ರಿ, ಆಶ್ರಯ ಸಮಿತಿ ಸದಸ್ಯರಾದ ಶ್ರೀನಿವಾಸ್ ,ಅಣ್ಣಾದೊರೆ, ಅಮ್ಜದ್ ಪಾಷಾ, ನಗರಸಭೆ ಮಾಜಿ ಸದಸ್ಯರಾದ ವೆಂಕಟಮುನಿ, ದರ್ಶನ್ ಮತ್ತಿತರರಿದ್ದರು.

# ಹಾಸನದಲ್ಲಿ ವ್ಯಕ್ತಿಯ ಬರ್ಬರ ಹತ್ಯೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಚನ್ನಪಟ್ಟಣ ಸರ್ಕಲ್ ಬಳಿ ಸೋಮವಾರ ಹಾಡ ಹಗಲೇ ವ್ಯಕ್ತಿಯೊಬ್ಬರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಬೆಂಗಳೂರುಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಘಟನೆ ನಡೆದಿದ್ದು, ತಾಲೂಕಿನ ಕಲ್ಲಹಳ್ಳಿ ಗ್ರಾಮದ ಮಣಿ ಅಲಿಯಾಸ್ ಮಣಿಕಂಠ (35) ಕೊಲೆಯಾದ ವ್ಯಕ್ತಿ.

ಮಣಿಕಂಠ ಅವರು ನಗರದ 80 ಅಡಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮಧ್ಯಾಹ್ನ 2 ಗಂಟೆಗೆ ತಮ್ಮದೇ ಮನೆಯ ಗೃಹಪ್ರವೇಶ ಕಾರ್ಯಕ್ರಮವಿದ್ದ ಹಿನ್ನೆಲೆಯಲ್ಲಿ ಪೆಟ್ರೋಲ್ ಬಂಕ್‌ನಿಂದ ಮನೆಗೆ ತೆರಳಿದ್ದರು ಎನ್ನಲಾಗಿದೆ.

ಎಪಿಎಂಸಿ ವರೆಗೆ ಬೈಕ್‌ನಲ್ಲಿ ಡ್ರಾಪ್ ಪಡೆದುಕೊಂಡು ತೆರಳುತ್ತಿದ್ದ ವೇಳೆ ದುಷ್ಕರ್ಮಿಗಳು ಮಣಿಕಂಠನ ಮೇಲೆ ದಾಳಿ ನಡೆಸಿ, ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾರೆಂದು ತಿಳಿದುಬಂದಿದೆ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಕೋ ತಂಡವೂ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದೆ. ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದು, ಬಡಾವಣೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

# ವಡೂರಿನಲ್ಲಿ ರಸ್ತೆ-ಚರಂಡಿ ಕಾಮಗಾರಿಗೆ ಭೂಮಿಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡೂರು ಗ್ರಾಮದಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದ ನೂತನ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಭೂಮಿಪೂಜೆ ನೆರವೇರಿದರು..

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನಾನು ಶಾಸಕನಾಗುವ ಮುನ್ನವೇ ಈ ಭಾಗಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ರಸ್ತೆ ನಿರ್ಮಿಸಿಕೊಡುವ ಭರವಸೆ ನೀಡಿದ್ದೆ. ಇತ್ತೀಚೆಗೆ ಗ್ರಾಮಕ್ಕೆ ಭೇಟಿ ನೀಡಿದಾಗಲೂ ಗ್ರಾಮಸ್ಥರಿಗೆ ಮಾತು ಕೊಟ್ಟಿದ್ದೆ. ಅದರಂತೆ ಇಂದು ಕಾಮಗಾರಿಗೆ ಚಾಲನೆ ನೀಡುತ್ತಿರುವುದು ಸಂತಸ ತಂದಿದೆ ಎಂದರು.

ಸುಮಾರು 200 ಮೀಟರ್ ರಸ್ತೆ ಹಾಗೂ ಅಗತ್ಯವಿರುವ ಪ್ರದೇಶದಲ್ಲಿ 100 ಮೀಟರ್ ಚರಂಡಿ ನಿರ್ಮಾಣಕ್ಕೆ 20 ಲಕ್ಷ ರೂ. ಅನುದಾನ ಒದಗಿಸಲಾಗಿದೆ. ಮಲೆನಾಡು ಭಾಗದಲ್ಲಿ ಉತ್ತಮ ರಸ್ತೆ ಸಂಪರ್ಕಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಗತ್ಯವಿರುವ ಕಡೆ ರಸ್ತೆ ಮತ್ತು ಮೂಲಸೌಕರ್ಯ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ ಎಂದು ತಿಳಿಸಿದರು.

ಗುಣಮಟ್ಟದಲ್ಲಿ ರಾಜಿ ಬೇಡ: ಕಾಮಗಾರಿ ಕೈಗೊಳ್ಳುವ ಗುತ್ತಿಗೆದಾರರು ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸರ್ಕಾರದ ಅನುದಾನ ಸದ್ಬಳಕೆಯಾಗುವುದರ ಜತೆಗೆ ಹಲವು ವರ್ಷಗಳ ಕಾಲ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ರಸ್ತೆ ನಿರ್ಮಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚಿಸಿದರು.

ಈ ವೇಳೆ ಗ್ರಾಮಸ್ಥರು ಶಾಸಕರ ಕಾರ್ಯವೈಖರಿಯನ್ನು ಶ್ಲಾಘಿಸಿದರು. ನಮ್ಮ ಗ್ರಾಮದ ರಸ್ತೆ ನಿರ್ಮಾಣವಾಗಬೇಕು ಎಂಬುದು ಹಲವು ವರ್ಷಗಳ ಕನಸಾಗಿತ್ತು. ಈ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತಂದಾಗಲೆಲ್ಲ ಅವರು ನಮ್ಮ ಮನವಿಗೆ ಸ್ಪಂದಿಸಿ, ಆದ್ಯತೆ ನೀಡಿ ರಸ್ತೆ ನಿರ್ಮಿಸಿಕೊಡುವ ಭರವಸೆ ನೀಡಿದ್ದರು. ಈಗ ಅನುದಾನ ಒದಗಿಸಿ ಕಾಮಗಾರಿಗೂ ಚಾಲನೆ ನೀಡಿದ್ದಾರೆ. ಗ್ರಾಮಸ್ಥರ ಬೇಡಿಕೆಗೆ ಸ್ಪಂದಿಸಿ ಕೊಟ್ಟ ಮಾತನ್ನು ಉಳಿಸಿಕೊಂಡಿರುವ ಶಾಸಕ ಸಿಮೆಂಟ್ ಮಂಜು ಅವರಿಗೆ ಗ್ರಾಮದ ಹಿರಿಯರು, ಮಹಿಳೆಯರು ಹಾಗೂ ಸ್ತ್ರೀಶಕ್ತಿ ಸಂಘಗಳ ಪರವಾಗಿ ಹೃತ್ಪೂರ್ವಕ ಧನ್ಯವಾದ ಸಲ್ಲಿಸುತ್ತೇವೆ ಎಂದು ಗ್ರಾಮಸ್ಥರು ಹೇಳಿದರು.

ಗ್ರಾಮದ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಶಾಸಕರ ಕಾರ್ಯವೈಖರಿ ಮೆಚ್ಚುವಂತದ್ದು. ಮುಂದಿನ ದಿನಗಳಲ್ಲಿಯೂ ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ ಶಾಸಕರಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಗ್ರಾಮಸ್ಥರು ತಿಳಿಸಿದರು.

# ಪ್ರತಿ ಶಾಲೆಗೂ ದೈಹಿಕ ಶಿಕ್ಷಣ ಶಿಕ್ಷಕರ ನೇಮಕವಾಗಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಬೆಳೆಸಲು ಪ್ರತಿ ಶಾಲೆಗೂ ಕನಿಷ್ಠ ಒಬ್ಬ ದೈಹಿಕ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಮಲ್ನಾಡ್ ಪ್ರೌಢಶಾಲಾ ಸಂಘ ಹಾಗೂ ಶಾರದಾ ಕೆ.ಎನ್. ರಾಜಶೇಖರ್ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕೆ.ಹೊಸಕೋಟೆ ಹೋಬಳಿ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ತಾಲೂಕಿನಲ್ಲಿ ದೈಹಿಕ ಶಿಕ್ಷಕರ ಸಂಖ್ಯೆ ಅತ್ಯಂತ ಕಡಿಮೆಯಿದ್ದು, ಮಕ್ಕಳಿಗೆ ಸಮರ್ಪಕ ಕ್ರೀಡಾ ತರಬೇತಿ ನೀಡಲು ಸಾಧ್ಯವಾಗುತ್ತಿಲ್ಲ. ಈ ಕುರಿತು ಸರ್ಕಾರದ ಗಮನ ಸೆಳೆಯಲಾಗಿದ್ದು, ದೈಹಿಕ ಶಿಕ್ಷಕರ ನೇಮಕಕ್ಕೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂದರು.

ಮಕ್ಕಳಿಗೆ ಆಟವಾಡಲು ಲಭ್ಯವಿರುವ ಮೈದಾನಗಳು ದಿನೇದಿನೆ ಕಡಿಮೆಯಾಗುತ್ತಿವೆ. ಖಾಲಿ ಜಾಗಗಳು ಬಡಾವಣೆ ಹಾಗೂ ಕಟ್ಟಡಗಳಾಗಿ ಪರಿವರ್ತನೆಯಾಗುತ್ತಿದ್ದು, ಆಟದ ಮೈದಾನಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಕ್ರೀಡೆಗೂ ಆದ್ಯತೆ ನೀಡಬೇಕು. ಕ್ರೀಡೆ, ವ್ಯಾಯಾಮ ಹಾಗೂ ವಾಕಿಂಗ್ ಉತ್ತಮ ಆರೋಗ್ಯಕ್ಕೆ ಸಹಕಾರಿ. ಶಾಲಾ ಕ್ರೀಡಾಕೂಟಗಳಿಗೆ ಸರ್ಕಾರ ನೀಡುತ್ತಿರುವ ಅನುದಾನ ಸಾಕಾಗುತ್ತಿಲ್ಲ. ಅನುದಾನ ಹೆಚ್ಚಿಸುವ ಜತೆಗೆ ಕ್ರೀಡಾಕೂಟಗಳ ಯಶಸ್ಸಿಗೆ ನೆರವಾಗುತ್ತಿರುವ ದಾನಿಗಳ ಸೇವೆಯನ್ನೂ ಪ್ರೋತ್ಸಾಹಿಸಬೇಕು ಎಂದರು.

ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿ. ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಮತ್ತು ಶಿಸ್ತು ನೀಡುವ ಮೂಲಕ ದೇಶದ ಉತ್ತಮ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣೇಗೌಡ, ಮುಖ್ಯೋಪಾಧ್ಯಾಯರು, ಮುಖಂಡರು, ಶಿಕ್ಷಕರು ಉಪಸ್ಥಿತರಿದ್ದರು.

# 26.74 ಕೋಟಿ ರೂ. ಲಾಭದಲ್ಲಿ ಹಾಸನ ಡೇರಿ: ರೇವಣ್ಣ

## 5.32 ಕೋಟಿ ರೂ. ಬೋನಸ್ | ಡಿವಿಡೆಂಡ್ ರೂಪದಲ್ಲಿ ಹಂಚಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮೂರು ಜಿಲ್ಲೆಗಳನ್ನೊಳಗೊಂಡ ಹಾಸನ ಹಾಲು ಒಕ್ಕೂಟವು 2025-26ನೇ ಸಾಲಿನಲ್ಲಿ 2,713.19 ಕೋಟಿ ವಹಿವಾಟು ನಡೆಸಿ, 26.74 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಒಕ್ಕೂಟದ ಅಧ್ಯಕ್ಷ ಹೆಚ್.ಡಿ.ರೇವಣ್ಣ ತಿಳಿಸಿದರು.





ನಗರದ ಒಕ್ಕೂಟದ ಕಚೇರಿಯಲ್ಲಿ ಸೋಮವಾರ ನಡೆದ ಸರ್ವ ಸದಸ್ಯರ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಈ ಪೈಕಿ 5.32 ಕೋಟಿ ರೂ. ಒಕ್ಕೂಟದ ನಿಯಮಾನುಸಾರ ಸಂಘದ ಸದಸ್ಯರಿಗೆ ಬೋನಸ್, ಡಿವಿಡೆಂಡ್ ಸೇರಿ ವಿವಿಧ ರೂಪದಲ್ಲಿ ಹಂಚಿಕೆ ಮಾಡಲಾಗಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ ಗರಿಷ್ಠ 16.66 ಲಕ್ಷ ಲೀಟರ್ ಹಾಲು ಸಂಗ್ರಹವಾಗಿದ್ದು, ಹಾಲು ಸಂಗ್ರಹಣೆಯಲ್ಲಿ ನಿರೀಕ್ಷೆಯಂತೆ ಪ್ರಗತಿ ಸಾಧಿಸಲಾಗಿದೆ. ಪ್ರಸ್ತುತ ಒಕ್ಕೂಟದ ವ್ಯಾಪ್ತಿಯ 1,764 ಹಾಲು ಉತ್ಪಾದಕರ ಸಂಘಗಳಿಂದ ಪ್ರತಿದಿನ ಸರಾಸರಿ 15 ಲಕ್ಷ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ ಎಂದರು.

ಮುಂದಿನ ಸಾಲಿನಲ್ಲಿ 3,182.35 ಕೋಟಿ ರೂ. ವಹಿವಾಟಿನ ಗುರಿ, 5.32 ಕೋಟಿ ನಿವ್ವಳ ಆದಾಯ ನಿರೀಕ್ಷಿಸಲಾಗಿದೆ. 1,764 ಹಾಲು ಉತ್ಪಾದಕರ ಸಂಘಗಳಲ್ಲಿ 709 ಸಂಘಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಕ್ಕೂಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 4 ಸಾವಿರ ಸಿಬ್ಬಂದಿಗೆ ಆರೋಗ್ಯ ವಿಮೆ ಕಲ್ಪಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಹಾಸನ ಒಕ್ಕೂಟ, ಹೆಚ್ಚುವರಿ ಹಾಲು ಉತ್ಪಾದಿಸುವ ಒಕ್ಕೂಟಗಳಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಆದರೆ ಸೀಮಿತ ಮಾರುಕಟ್ಟೆ ಇರುವುದರಿಂದ ಪ್ರತಿದಿನ 4.5 ರಿಂದ 5 ಲಕ್ಷ ಲೀಟರ್ ಹಾಲನ್ನು ಪರಿವರ್ತನೆಗಾಗಿ ಬೇರೆಡೆಗೆ ಕಳುಹಿಸಬೇಕಾಗಿದೆ ಎಂದರು.

ನಮಗೆ ಬೆಂಗಳೂರಲ್ಲೂ ಮಾರುಕಟ್ಟೆ ಒದಗಿಸುವಂತೆ ಕಳೆದ 12 ವರ್ಷಗಳಿಂದಲೂ ಮನವಿ ಮಾಡಲಾಗುತ್ತಿದೆ. ಈ ಬಗ್ಗೆ ಸರ್ಕಾರಕ್ಕೂ ಮನವಿ ಸಲ್ಲಿಸಲಾಗಿದ್ದು, ಈ ಬಾರಿಯೂ ಬೆಂಗಳೂರು ಮಾರುಕಟ್ಟೆಯನ್ನು ಹಾಸನ ಹಾಲು ಒಕ್ಕೂಟಕ್ಕೆ ಹಂಚಿಕೆ ಮಾಡಲು ಅವಕಾಶ ಕಲ್ಪಿಸುವಂತೆ ಒತ್ತಾಯಿಸಲಾಗುವುದು ಎಂದರು.

ಒಕ್ಕೂಟದಿಂದ ರಾಜ್ಯದ ವಿವಿಧ ಭಾಗಗಳಲ್ಲದೆ ಹೊರ ರಾಜ್ಯಗಳಿಗೂ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. ತೆಲಂಗಾಣ, ಹೈದರಾಬಾದ್ ಸೇರಿದಂತೆ ಹಲವು ಪ್ರದೇಶಗಳಿಗೆ ಉತ್ಪನ್ನ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಒಕ್ಕೂಟದ ಧರ್ಮಾರ್ಥ ನಿಧಿಯಿಂದ ಸುಮಾರು 40 ಲಕ್ಷ ರೂ.ವೆಚ್ಚದಲ್ಲಿ ಕಂಪ್ಯೂಟರ್, ಟೇಬಲ್, ಡೆಸ್ಕ್ ಸೇರಿ ಅಗತ್ಯ ಪರಿಕರ ಖರೀದಿಸಿ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಒಕ್ಕೂಟದ ನಿರ್ದೇಶಕ ಹೊನ್ನವಳ್ಳಿ ಸತೀಶ್, ಎಂ.ಡಿ.ಮಹೇಶ್ ಇದ್ದರು.

### ಮೆಗಾ ಡೇರಿ ಶೀಘ್ರ ಉದ್ಘಾಟನೆ

ನಗರದ ಕೈಗಾರಿಕಾ ಪ್ರದೇಶದಲ್ಲಿ 78 ಎಕರೆ ಜಾಗದಲ್ಲಿ ಅಂದಾಜು 830.66 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೆಗಾ ಡೇರಿಯ ಕಾಮಗಾರಿ ಬಹುತೇಕ ಪೂರ್ಣಗೊಂಡಿವೆ. ಸಣ್ಣಪುಟ್ಟ ಕಾಮಗಾರಿ ಬಾಕಿ ಉಳಿದಿದ್ದು, ಈ ವರ್ಷದ ಅಂತ್ಯದ ವೇಳೆಗೆ ಅಥವಾ 2027ರ ಆರಂಭದಲ್ಲಿ ಮೆಗಾ ಡೇರಿ ಕಾರ್ಯಾರಂಭಗೊಳ್ಳಲಿದೆ ಎಂದು ರೇವಣ್ಣ ಹೇಳಿದರು.

ಮೆಗಾ ಡೈರಿ ಆವರಣವನ್ನು ಆಕರ್ಷಕ ಪ್ರವಾಸಿ ತಾಣವನ್ನಾಗಿಸುವ ಉದ್ದೇಶದಿಂದ ಸುಮಾರು 72.87 ಕೋಟಿ ವೆಚ್ಚದಲ್ಲಿ ಥೀಮ್ ಪಾರ್ಕ್ ನಿರ್ಮಿಸಲಾಗುತ್ತಿದೆ. ಮ್ಯೂಸಿಯಂ, ಜಲಪಾತ, ಉದ್ಯಾನವನ, ಸಂಗೀತ ಕಾರಂಜಿ ಸೇರಿ ಹಲವು ಆಕರ್ಷಣೆಗಳನ್ನು ಇಲ್ಲಿ ನಿರ್ಮಿಸಲಾಗುತ್ತಿದೆ ಎಂದರು.

# ನೇತ್ರದಾನದ ಮಹತ್ವ ಎಲ್ಲರಿರಗೂ ತಿಳಿಯಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಜನರಲ್ಲಿ ನೇತ್ರದಾನದ ಮಹತ್ವದ ಕುರಿತು ಜಾಗೃತಿ ಮೂಡಿಸುವುದು ಮತ್ತು ಮರಣಾನಂತರ ನೇತ್ರದಾನ ಮಾಡಲು ಪ್ರೇರೇಪಿಸುವುದು ನೇತ್ರದಾನ ಪಾಕ್ಷಿಕದ ಉದ್ದೇಶವಾಗಿದೆ ಎಂದು ಲಯನ್ಸ್ ಸೇವಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ವಿ.ಮಹೇಶ್ ತಿಳಿಸಿದರು.





ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಸೋಮವಾರ ತಾಲೂಕು ಆಡಳಿತ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಾರ್ವಜನಿಕ ಆಸ್ಪತ್ರೆ ಹಾಗೂ ಲಯನ್ಸ್ ಕ್ಲಬ್ ವತಿಯಿಂದ ನಡೆದ 41ನೇ ನೇತ್ರದಾನ ಪಾಕ್ಷಿಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನೇತ್ರದಾನ ಮಹಾದಾನ ನೇತ್ರದಾನದಿಂದ ಅಂಧರಿಗೆ ಜಗತ್ತನ್ನು ನೋಡುವ ಅವಕಾಶ ಲಭಿಸುತ್ತದೆ. ಆದರೆ, ಸಾಮಾಜಿಕ ಮತ್ತು ಧಾರ್ಮಿಕ ಸಾಂಪ್ರದಾಯಿಕ ಕಟ್ಟುಪಾಡುಗಳು, ಭಯ ಮತ್ತು ಹಲವು ಗೊಂದಲದಿಂದಾಗಿ ಜನರು ನೇತ್ರದಾನ ಮಾಡಲು ಹಿಂದೇಟು ಹಾಕುತ್ತಾರೆ. ಅಗತ್ಯ ಮಾಹಿತಿ ಕೊರತೆಯಿಂದ ಆಸಕ್ತಿ ಇರುವವರು ಕೂಡ ನೇತ್ರದಾನ ಮಾಡಲು ಸಾಧ್ಯವಾಗುತ್ತಿಲ್ಲ. ನೇತ್ರದಾನದ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತಿವರ್ಷ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಬಿ. ಧರಣೇಶ್ ಮಾತನಾಡಿ, ಕಣ್ಣುಗಳು ಮಾನವ ದೇಹದ ಅತ್ಯಂತ ಅಮೂಲ್ಯವಾದ ಅಂಗವಾಗಿದೆ. ಸತ್ತ ನಂತರ, ಕಣ್ಣುಗಳನ್ನು ಅಗ್ನಿ ಸ್ಪರ್ಶ ಅಥವಾ ಮಣ್ಣಿನಲ್ಲಿ ಹೂಳುವ ಮೂಲಕ ವ್ಯರ್ಥ ಮಾಡಬಾರದು. ಮೃತ ವ್ಯಕ್ತಿಯ ಕಣ್ಣುಗಳನ್ನು ದಾನ ಮಾಡುವುದರಿಂದ ಇಬ್ಬರು ಅಂಧರು ದೃಷ್ಟಿ ಪಡೆಯಬಹುದು. ನೇತ್ರದಾನವು ಕಾರ್ನಿಯಲ್ ಕುರುಡುತನದಿಂದ ಬಳಲುತ್ತಿರುವ ಜನರು ತಮ್ಮ ದೃಷ್ಟಿಯನ್ನು ಮರಳಿ ಪಡೆಯಲು ಸಹಾಯ ಮಾಡುತ್ತದೆ.

ತಾಲೂಕು ಆರೋಗ್ಯ ಅಧಿಕಾರಿ ಡಾ.ಟಿ.ಎಚ್.ಹರೀಶ್ ಮಾತನಾಡಿ, ಕಣ್ಣುಗಳು ನಮ್ಮ ದೇಹದ ಅತ್ಯಂತ ಅಮೂಲ್ಯವಾದ ಅಂಗಗಳಾಗಿದ್ದು, ಅವುಗಳ ರಕ್ಷಣೆ ಮತ್ತು ಆರೋಗ್ಯದ ಬಗ್ಗೆ ನಾವೆಲ್ಲರೂ ಹೆಚ್ಚಿನ ಎಚ್ಚರಿಕೆ ವಹಿಸುವುದು ಅತ್ಯಗತ್ಯವಾಗಿದೆ. ಕಣ್ಣಿನ ಅಕ್ಷಿ ಪಟೀಲ ರೋಗಕ್ಕೆ ಮಧುಮೇಹ, ರಕ್ತದೊತ್ತಡ ಕಾರಣವಾಗಿದ್ದು, ಕಣ್ಣಿನ ಕಾಯಿಲೆಯನ್ನು ಕೂಡಲೇ ವೈದ್ಯರಿಗೆ ತೋರಿಸಿ ಪರಿಹರಿಸಿಕೊಳ್ಳಬೇಕು ಎಂದರು.

ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ವೈದ್ಯ ನರ್ಸಿಂಗ್ ಶಾಲೆಯ ವಿದ್ಯಾರ್ಥಿಗಳು ಹಾಗೂ ಲಯನ್ಸ್ ಕ್ಲಬ್ ಸನ್ ರೈಸ್, ಚನ್ನರಾಯಪಟ್ಟಣ ಪದಾಧಿಕಾರಿಗಳು ಜಾಥಾ ಕಾರ್ಯಕ್ರಮದಲ್ಲಿ ಸಾವಿನ ನಂತರ ದಾನವಾಗಲಿ ನಿಮ್ಮದೊಂದು ಕಣ್ಣು, ನಮ್ಮ ನಂತರವೂ ಜಗತ್ತನ್ನು ನೋಡಲು ನೇತ್ರದಾನವೊಂದೇ ದಾರಿ ಮುಂತಾದ ಘೋಷಣಾ ಫಲಕಗಳನ್ನು ಹಿಡಿದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಲಯನ್ಸ್ ಸೇವಾ ಸಂಸ್ಥೆಯ ಅಧ್ಯಕ್ಷ ಜೆ.ಸಿ.ಗೋವಿಂದರಾಜು, ಕಾರ್ಯದರ್ಶಿ ಡಿ.ಕೆ.ಮಂಜುನಾಥ್, ಖಜಾಂಚಿ ಕಾಂತರಾಜು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಾದೀಕ್ಷಕಿ ಪದ್ಮಮ್ಮ, ಕ್ಷ ಕಿರಣ ತಂತ್ರಜ್ಞ ಗುರುಮೂರ್ತಿ ಮತ್ತಿತರರಿದ್ದರು.

# ಹೆಚ್.ಕೆ. ಗೋವಿಂದೇಗೌಡರ ಜೀವನ ಸ್ಮರಣೀಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇಂದು ನಿಯಮ ಮುರಿದು ಬಾಳುತ್ತಿರುವವರ ಮಧ್ಯೆ ಮಲೆನಾಡ ಗಾಂಧಿ ಹೆಚ್.ಜಿ.ಗೋವಿಂದೇಗೌಡ ಅವರಂಥವರು ವಿರಳಾತಿ ವಿರಳ ಎಂದು ಸಂಸ್ಕೃತಿ ಚಿಂತಕ ಸುಧೀರ್ ಕುಮಾರ್ ಮುರೊಳ್ಳಿ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ಹಾಗೂ ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ ಜಿಲ್ಲಾ ಘಟಕದಿಂದ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಮಲೆನಾಡ ಗಾಂಧಿ, ಮಾಜಿ ಶಿಕ್ಷಣ ಸಚಿವ ಹೆಚ್.ಜಿ.ಗೋವಿಂದೇಗೌಡ ಶತಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದರು.

1990ರ ದಶಕದಲ್ಲಿ ಹೆಚ್ಚು ಶಿಕ್ಷಕರು ಸರ್ಕಾರಿ ಕೆಲಸ ಪಡೆಯಲು ಗೌಡರು ರೂಪಿಸಿದ ಪಾಲಿಸಿ ಕಾರಣ, ಅವರು ಅಪಾರ ದೈವ ಭಕ್ತರು,ಶ್ರದ್ಧೆ ಹೊಂದಿದ್ದರು. ಆದರೆ ವೈಜ್ಞಾನಿಕತೆ ರೂಪಿಸಿಕೊಂಡಿದ್ದರು. ಹಾಗಂತ ಸಂಪ್ರದಾಯ ಧಿಕ್ಕರಿಸಿದವರಲ್ಲ, ಅಪ್ಪಟ ತಾಜಾತನ,

ಕೆಲಸದಲ್ಲಿ ಬದ್ಧತೆ, ನಿಷ್ಠುರ ಶಕ್ತಿ-ವ್ಯಕ್ತಿತ್ವ, ಅಪ್ಪಟ ಸರಳತನ ಹೊಂದಿದ್ದರು. ಅವರಂತೆಯೇ ಗುಣಾತ್ಮಕ ನಾಯಕತ್ವ ಬೆಳೆಸಿದರು ಎಂದು ಕೊಂಡಾಡಿದರು.



ಗೋವಿಂದೇಗೌಡರು ನನ್ನ ಬಗ್ಗೆ ಬರೆಯಿರಿ ಎಂದು ಪತ್ರಕರ್ತರಿಗೆ ಅರ್ಧಲೋಟ ಕಾಫಿ ಕುಡಿಸಿದವರಲ್ಲ. ಆದರೆ ಅವರ ಬಗ್ಗೆ ಹೆಚ್ಚು ಪತ್ರಕರ್ತರು ಬರೆದರು. ಅವರಂತೆಯೇ ಕುಟುಂಬವನ್ನೂ ಒಲುಮೆಯಿಂದ ಬೆಳೆಸಿದರು.

ಕಡಿದಾಳ್ ಮಂಜಪ್ಪ ಅವರು ನನ್ನ ಮುಂದಿನ ಉತ್ತರಾಧಿಕಾರಿ ಗೊವಿಂದೇಗೌಡ ಆಗಬೇಕು ಎಂದು ಬರೆದಿದ್ದರು. ಮಹಾತ್ಮಗಾಂಧಿ ಹೋರಾಟಮಾಡಿದರೆ, ಅಂಬೇಡ್ಕರ್ ಸಂವಿಧಾನ ಮಾಡಿದರು. ಗೋವಿಂದೇಗೌಡರು ಶಿಕ್ಷಕರ ಆಯ್ಕೆಗೆ ಪಾಲಿಸಿ ತಂದರು ಸ್ಮರಿಸಿದರು.

ಲಯನ್ಸ್ ಮಾಜಿ ರಾಜ್ಯಪಾಲ ಹಾಗೂ ಗೋವಿಂದೇಗೌಡರ ಪುತ್ರ ಹೆಚ್.ಜಿ.ವೆಂಕಟೇಶ್ ಮಾತನಾಡಿ, ತಂದೆ ಅಧಿಕಾರದಲ್ಲಿದ್ದಾಗಲೇ ರಾಜಕೀಯ ನಿವೃತ್ತಿ, ಪಡೆದರು.

ಶಿಕ್ಷಣ ಸಚಿವರಾಗಿ ಪಾರದರ್ಶಕ ಕೆಲಸ ಮಾಡಿದ್ದಾರೆ.ಅವರು ಸಚಿವರಾಗಿದ್ದಾಗ ಸಾಮಾನ್ಯ ಮನುಷ್ಯರೂ ಅವರನ್ನು ಭೇಟಿ ಮಾಡಬಹುದಿತ್ತು. ಯಾವುದೇ ಭ್ರಷ್ಟಾಚಾರವಿಲ್ಲದೆ, 1.05 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿದರು. ಇಲ್ಲಿ ಅವರ ಜನ್ಮ ಶತಾಬ್ಧಿ ಕಾರ್ಯಕ್ರಮದ ಅವರನ್ನು ನೆನಪಿಸಿಕೊಳ್ಳುತ್ತಿರುವುದು ಸಂತೊಷದ ವಿಷಯ ಎಂದರು.

ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಮಾತನಾಡಿ, ಮಲೆನಾಡ ಗಾಂಧಿ ಎಂದೇ ಖ್ಯಾತರಾಗಿದ್ದ ಗೋವಿಂದೇಗೌಡರು, ಭ್ರಷ್ಟಾಚಾರ ರಹಿತ, ಪ್ರಾಮಾಣಿಕ ರಾಜಕಾರಣಿ, ಲಕ್ಷಾಂತರ ಶಿಕ್ಷಕರು ಕಡೆವರೆಗೂ ಮರೆಯಲಾಗದ ಕೆಲಸ ಮಾಡಿದ್ದಾರೆ ಎಂದರು.

ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ಗೋವಿಂದೇಗೌಡರ ನಡೆ-ನುಡಿ, ವಿಚಾರಗಳ ಚಿಂತನ-ಮಂಥನ ನಡೆಯಬೇಕು ಎಂಬ ಕಾರಣದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜು, ಮಾಜಿ ಅಧ್ಯಕ್ಷರಾದ ಚೈತ್ರ ಮಂಜೇಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಮಾತನಾಡಿದರು. ಕೊಪ್ಪ ಪತ್ರಕರ್ತರ ಸಂಘದ ಅಧ್ಯಕ್ಷ ಜಿನೇಶ್ ಇದ್ದರು. ಪತ್ರಕರ್ತ ಚಲಂ ಹಾಡ್ಲಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ವಂದಿಸಿದರು.

# ಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಮಹತ್ವದ ಆಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾಡಾಳು: ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತ ಉತ್ತಮ ಶಿಕ್ಷಣ ನೀಡಿ ಸಮಾಜದ ಆಸ್ತಿಯನ್ನಾಗಿ ರೂಪಿಸುವುದು ಪೋಷಕರ ಜವಾಬ್ದಾರಿ ಎಂದು ಮಾಡಾಳು ನಿರಂಜನ ಪೀಠ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶ್ರೀ ರುದ್ರಮುನಿ ಸ್ವಾಮೀಜಿ ಹೇಳಿದರು.

ಅರಸೀಕೆರೆ ತಾಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ನಿರಂಜನ ಪೀಠ ಸೌಹಾರ್ದ ಸಹಕಾರ ಸಂಘದ ಎರಡನೇ ವರ್ಷದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜ್ಞಾವಂತ ಸಮಾಜ ಕವಲೊಡೆದ ದಾರಿಯಲ್ಲಿ ಸಾಗುತ್ತಿದ್ದು ಯುವಕರು ಆಧುನಿಕ ಜೀವನ ಶೈಲಿಗೆ ಒಳಗಾಗಿ ಸಂಕಷ್ಟ ಎದುರಿಸಿವಂತಾಗಿದೆ.

ಪರಿಸರದ ಮೇಲೆ ಮಾನವನ ಅತಿಯಾದ ಹಸ್ತಕ್ಷೇಪದಿಂದ ಪ್ರಕೃತಿ ವಿಕೋಪಗಳು ಸಂಭವಿಸುತ್ತಿದೆ. ಅತಿವೃಷ್ಟಿ ಹಾಗೂ ಅನಾವೃಷ್ಟಿಯಂತಹ ಪರಿಸ್ಥಿತಿ ಎದುರಾಗಿದೆ. ಜಿಲ್ಲೆಯಲ್ಲಿ ನಿರೀಕ್ಷಿತ ಮಳೆ ಬಾರದೆ ಅನ್ನದಾತರು ಕಂಗಾಲಾಗಿದ್ದಾರೆ. ಚುನಾಯಿತ ಜನಪ್ರತಿನಿಧಿಗಳು ಹಾಗು ಸರ್ಕಾರ ತಕ್ಷಣ ರೈತರ ನೆರವಿಗೆ ಭಾವಿಸಬೇಕು ಎಂದರು.

ಸಹಕಾರ ಸಂಘದ ಉಪಾಧ್ಯಕ್ಷ ನಾಗಸಮುದ್ರ ಮರುಳುಸಿದ್ದ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಸ್.ಸಿ.ಗಂಗಾಧರಪ್ಪ, ನಿರ್ದೇಶಕರಾದ ವಿಜಯ್ ಕುಮಾರ್, ಕಲ್ಲೇಶಪ್ಪ, ಡಿ.ಬಿ.ಕುಮಾರ್, ಸಿ.ಕೆ.ಸುಧಾ, ದ್ರಾಕ್ಷಾಯಿಣಿ, ಎಂ.ಸಿ.ಚಂದ್ರಶೇಖರಪ್ಪ, ಮುಖಂಡ ಕೊಡ್ಲಿ ಬಸವರಾಜ್, ಬ್ಯಾಂಕ್ ಕಾರ್ಯನಿರ್ವಾಹಣಾಧಿಕಾರಿ ಡಿ.ಆರ್.ಸುಷ್ಮಾ ಹಾಜರಿದ್ದರು.

# ಮದಗಜಗಳ ಕಾಳಗ: ಮನೆ ಮೇಲೆ ಉರುಳಿದ ಮರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಎರಡು ಕಾಡಾನೆಗಳ ಭೀಕರ ಕಾದಾಟದಿಂದ ಮರಗಳು ವಾಸದ ಮನೆ ಮೇಲೆ ಬಿದ್ದು ಹನಿ ಸಂಭವಿಸಿರುವ ಘಟನೆ ತಾಲ್ಲೂಕಿನ ಕೌರಿ ಗ್ರಾಮದಲ್ಲಿ ನಡೆದಿದೆ.

ಪುಟ್ಟಮ್ಮ ಎಂಬುವವರ ಮನೆಯ ಸಮೀಪವೇ ಸುಮಾರು 13 ಕಾಡಾನೆಗಳು ಬೀಡುಬಿಟ್ಟಿದ್ದು, ಅವುಗಳ ಪೈಕಿ ಎರಡು ಸಲಗಗಳು ಮದದಲ್ಲಿವೆ. ಈ ಎರಡು ಆನೆಗಳು ಬೆಳಿಗ್ಗೆಯಿಂದ ಕಾದಾಡುತ್ತಿದ್ದವು. ಕಾಳಗದ ರಭಸಕ್ಕೆ ಮರಗಳು ಮುರಿದು ಮನೆಯ ಮೇಲೆ ಉರುಳಿವೆ. ಘಟನೆಯಿಂದ ಮನೆಯ ಕಟ್ಟಡಕ್ಕೆ ಹಾನಿಯಾಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ವಿಷಯ ತಿಳಿದು ಸ್ಥಳಕ್ಕೆ ಇಟಿಎಫ್ (ಆನೆ ಕಾರ್ಯಪಡೆ) ಸಿಬ್ಬಂದಿ ಧಾವಿಸಿ ಪರಿಶೀಲನೆ ನಡೆಸಿದರು. ಮುನ್ನೆಚ್ಚರಿಕಾ ಕ್ರಮವಾಗಿ ಪುಟ್ಟಮ್ಮ ಅವರ ಕುಟುಂಬವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಎರಡು ಮದಗಜಗಳು ಪದೇ ಪದೆ ಕಾಳಗಕ್ಕೆ ಇಳಿಯುತ್ತಿರುವ ಹಿನ್ನಲೆಯಲ್ಲಿ ಅವುಗಳನ್ನು ನಿಯಂತ್ರಿಸಲು ಇಟಿಎಫ್ ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ. ಆನೆಗಳ ಚಲನವಲನದ ಮೇಲೆ ನಿಗಾ ಇರಿಸಲಾಗಿದ್ದು, ಕೌರಿ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗ್ರಾಮಸ್ಥರಿಗೆ ಎಚ್ಚರಿಕೆ ನೀಡಲಾಗಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಮೈಕ್ ಮೂಲಕ ಗ್ರಾಮದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿದ್ದು, ಅನಗತ್ಯವಾಗಿ ಹೊರಗೆ ಸಂಚರಿಸದಂತೆ ಹಾಗೂ ಆನೆಗಳಿರುವ ಪ್ರದೇಶಗಳಿಗೆ ತೆರಳದಂತೆ ಸೂಚಿಸಿದ್ದಾರೆ. ವಿಶೇಷವಾಗಿ ಕಾಫಿ ತೋಟಗಳಿಗೆ ಕಾರ್ಮಿಕರು ತೆರಳುವ ಮುನ್ನ ಅರಣ್ಯ ಇಲಾಖೆ ಅಥವಾ ಇಟಿಎಫ್ ಸಿಬ್ಬಂದಿಯಿಂದ ಆನೆಗಳ ಚಲನವಲನದ ಕುರಿತು ಮಾಹಿತಿ ಪಡೆದುಕೊಳ್ಳುವಂತೆ ಸಲಹೆ ನೀಡಿದ್ದಾರೆ.

# ಹಳ್ಳಿಮೈಸೂರಿಗೆ ಶಾಂತಿಗ್ರಾಮ ಹಾಸ್ಟೆಲ್ ಮಕ್ಕಳ ಸ್ಥಳಾಂತರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದನದ ಕೊಟ್ಟಿಗೆಯಂತಹ ಶೆಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಾಂತಿಗ್ರಾಮದ ಸಮಾಜ ಕಲ್ಯಾಣ ಇಲಾಖೆ ಅಧೀನದ ವಸತಿ ನಿಲಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಸೂಚನೆ ಮೇರೆಗೆ ಭಾನುವಾರ ಹಳ್ಳಿಮೈಸೂರಿಗೆ ಸ್ಥಳಾಂತರಿಸಲಾಯಿತು.

ಬಾಡಿಗೆ ಕಟ್ಟಡವೊಂದರಲ್ಲಿ ಕಳೆದ ಐದು ವರ್ಷಗಳಿಂದ ವಸತಿ ಶಾಲೆ ನಡೆಯುತ್ತಿತ್ತು. 172 ಮಕ್ಕಳು ಇಕ್ಕಟ್ಟು ಜಾಗದಲ್ಲಿ ವಾಸ್ತವ್ಯ ಹೂಡಿದ್ದರು. ಶನಿವಾರ ನಡೆದ ಪ್ರಜಾ ಸೇವೆ ಆಂದೋಲನದಲ್ಲಿ ವಿಷಯ ಪ್ರಸ್ತಾಪಿಸಿದ್ದ ಸಚಿವ ಶಿವಲಿಂಗೇಗೌಡ ಅವರು ವಾರದೊಳಗೆ ಬೇರೆ ಕಟ್ಟಡಕ್ಕೆ ಮಕ್ಕಳನ್ನು ಸ್ಥಳಾಂತರಿಸಬೇಕೆಂದು ಖಡಕ್ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಭಾನುವಾರ ಸ್ಥಳಕ್ಕೆ ತೆರಳಿದ್ದ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ದೂದ್‌ಪೀರ್, ಶಾಂತಿಗ್ರಾಮ ಪೊಲೀಸರು ವಸತಿ ನಿಲಯ ಮಕ್ಕಳನ್ನು ಹಳ್ಳಿಮೈಸೂರಿನ ಸ್ವಂತ ಕಟ್ಟಡಕ್ಕೆ ಸ್ಥಳಾಂತರ ಮಾಡಿದರು.

ಪೋಷಕರು-ಮಕ್ಕಳ ಪ್ರತಿಭಟನೆ:

ಶಾಂತಿಗ್ರಾಮದ ವಸತಿ ಶಾಲೆಯಲ್ಲೇ ಉತ್ತಮ ಶಿಕ್ಷಣ, ವಸತಿ ವ್ಯವಸ್ಥೆ ಇದ್ದು



ನಾವು ಬೇರೆ ಕಡೆಗೆ ಹೋಗುವುದಿಲ್ಲವೆಂದು ಮಕ್ಕಳು ಆಕ್ರೋಶ ವ್ಯಕ್ತಪಡಿಸಿದರು. ಮಕ್ಕಳಿಗೆ ಆಗದ ಸಮಸ್ಯೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಾಧ್ಯಮದವರಿಗೆ ಆಗುತ್ತಿರುವುದು ಏಕೆ. ನಮಗೆ ಇಲ್ಲಿ ಉತ್ತಮ ಶಿಕ್ಷಣ ಸಿಗುತ್ತಿದೆ. ಒಳ್ಳೆಯ ಫಲಿತಾಂಶವೂ ಬರುತ್ತಿದೆ. ಏಕಾಏಕಿ ಬೇರೆ ಕಡೆಗೆ ಕಳುಹಿಸಿದರೆ ಹೇಗೆ ಎಂದು ಪ್ರಶ್ನಿಸಿದರು. ಅದಕ್ಕೆ ಪೋಷಕರು ಧ್ವನಿಗೂಡಿಸಿ ಯಾವ ಕಾರಣಕ್ಕೂ ಮಕ್ಕಳನ್ನು ಹಳ್ಳಿಮೈಸೂರಿಗೆ ಕಳುಹಿಸುವುದಿಲ್ಲವೆಂದು ಪಟ್ಟು ಹಿಡಿದರು.

ಈ ವೇಳೆ ಅಧಿಕಾರಿಗಳು ಹಾಗು ಪೋಷಕರ ನಡುವೆ ಜೋರು ವಾಗ್ವಾದ ನಡೆಯಿತು. ಸಂಜೆ ಬಳಿಕ ಮಕ್ಕಳನ್ನು ಖಾಸಗಿ ಬಸ್‌ಗಳ ಮೂಲಕ ಕರೆದೊಯ್ಯಲಾಯಿತು.

ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ 172 ಮಕ್ಕಳು ಕಳೆದ ಐದು ವರ್ಷಗಳಿಂದ ದನದ ಕೊಟ್ಟಿಗೆಯಂತಿರುವ ಕಟ್ಟಡದಲ್ಲಿ ವಾಸಿಸುತ್ತಿದ್ದರು. 6ನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳ ಪೈಕಿ 92 ಬಾಲಕರು ಹಾಗೂ 80 ಬಾಲಕಿಯರಿದ್ದಾರೆ.

ಮಕ್ಕಳಿಗೆ ಪ್ರತ್ಯೇಕ ವಸತಿ, ಅಧ್ಯಯನ ಹಾಗೂ ಊಟದ ವ್ಯವಸ್ಥೆ ಕಲ್ಪಿಸುವ ಬದಲು ಒಂದೇ ಸ್ಥಳದಲ್ಲಿ ಊಟ, ಅಲ್ಲಿಯೇ ಮಲಗುವುದು ಹಾಗೂ ಪಾಠ ಕೇಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

92 ಬಾಲಕರಿಗೆ ಕೇವಲ 5 ಶೌಚಾಲಯ, ಬಾಲಕಿಯರಿಗೂ ಸುಸಜ್ಜಿತ ಶೌಚಗೃಹಗಳು ಇರಲಿಲ್ಲ. ಈ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗುತ್ತಿದ್ದಂತೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

# ಟ್ರ್ಯಾಕ್ಟರ್ ಟ್ರ್ಯಾಲಿ ಮೇಲಿಂದ ಬಿದ್ದು ವ್ಯಕ್ತಿ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಚಲಿಸುತ್ತಿದ್ದ ಟ್ರ್ಯಾಕ್ಟರ್ ಟ್ರ್ಯಾಲಿಯ ಉಕ್ಕು ತುಂಡರಿಸಿ ಕೆಳಗೆ ಬಿದ್ದ ವ್ಯಕ್ತಿ ಮೃತಪಟ್ಟು ಮತ್ತೊಬ್ಬರು ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕಬಳಿಗೆರೆ ಸಮೀಪ ನಡೆದಿದೆ.

ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕು ಶಡಗರವಳ್ಳಿ ಗ್ರಾಮದ ವಾಸಪ್ಪ ಭಜಂತ್ರಿ ಮೃತರು. ಕೂಲಿ ಕೆಲಸ ಅರಸಿ ಅರಕಲಗೂಡಿಗೆ ಬಂದಿದ್ದ ಅವರು ಕಳೆದ ಕೆಲ ವರ್ಷಗಳಿಂದ ನಾಗಾಪುರ ಗ್ರಾಮದ ಗಣೇಶ್ ಎಂಬುವವರ ಬಳಿ ಗಾರೆ ಮತ್ತಿತರ ಕೆಲಸ ಮಾಡಿಕೊಂಡಿದ್ದರು. ಶನಿವಾರ ವಾಸಪ್ಪ ಹಾಗೂ ರಮೇಶ ಅವರು ಹಳ್ಳಿಮೈಸೂರಿನಲ್ಲಿ ಸಿಮೆಂಟ್ ಲೋಡ್ ಮಾಡಿಕೊಂಡು ಬಿದರೂರು ಗ್ರಾಮಕ್ಕೆ ಹೋಗುತ್ತಿದ್ದರು. ಇಬ್ಬರೂ ಟ್ರ್ಯಾಲಿ ಮೇಲೆ ಕುಳಿತಿದ್ದರು. ಕಬಳಿಗೆರೆ ಸಮೀಪ ಚಾಲಕ ಟ್ರ್ಯಾಕ್ಟರ್ ಅನ್ನು ಜೋರಾಗಿ ಓಡಿಸಿದ್ದರಿಂದ ಉಕ್ಕು ತುಂಡರಿಸಿ ಟ್ರ್ಯಾಕ್ಟರ್‌ನಿಂದ ಟ್ರ್ಯಾಲಿ ಬೇರ್ಪಟ್ಟಿದೆ. ಹೀಗಾಗಿ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದಾರೆ. ಚಾಲಕನೇ ತಕ್ಷಣ ಆ್ಯಂಬುಲೆನ್ಸ್ ಮೂಲಕ ಗಾಯಾಳುಗಳನ್ನು ಹಿಮ್ಸ್‌ಗೆ ದಾಖಲಿಸಿದ್ದಾನೆ. ತಲೆಗೆ ಬಲವಾ ಏಟು ಬಿದ್ದ ಹಿನ್ನಲೆ ತೀವ್ರ ರಕ್ತಸ್ರಾವವಾಗಿ ವಾಸಪ್ಪ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-08

1504: ಮೈಕೆಲ್ಯಾಂಜೆಲೊ ಅವರ ಪ್ರಸಿದ್ಧ ಡೇವಿಡ್ ಶಿಲ್ಪವನ್ನು ಫ್ಲಾರೆನ್ಸ್ ನಲ್ಲಿ ಸಾರ್ವಜನಿಕವಾಗಿ ಅನಾವರಣಗೊಳಿಸಲಾಯಿತು.

1943: ದ್ವಿತೀಯ ವಿಶ್ವ ಯುದ್ಧದ ಸಂದರ್ಭದಲ್ಲಿ ಇಟಲಿ ಮಿತ್ರ ರಾಷ್ಟ್ರಗಳೊಂದಿಗೆ ಕದನ ವಿರಾಮ ಒಪ್ಪಂದ ಮಾಡಿಕೊಂಡಿರುವುದನ್ನು ಅಧಿಕೃತವಾಗಿ ಘೋಷಿಸಿತು.

1966: ಅಮೆರಿಕದ ಪ್ರಸಿದ್ಧ ವೈಜ್ಞಾನಿಕ ಕಾಲ್ಪನಿಕ ದೂರದರ್ಶನ ಸರಣಿ ಸ್ಟಾರ್ ಟ್ರೆಕ್ ಮೊದಲ ಬಾರಿಗೆ ಪ್ರಸಾರವಾಯಿತು.

1967: ವಿಶ್ವಸಂಸ್ಥೆಯ ಶಿಕ್ಷಣ, ವಿಜ್ಞಾನ ಮತ್ತು ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಿಸುವ ಪರಂಪರೆ ಆರಂಭವಾಯಿತು.

1974: ಅಮೆರಿಕದ ಅಧ್ಯಕ್ಷ ಜೆರಾಲ್ಡ್ ಫೋರ್ಡ್, ಮಾಜಿ ಅಧ್ಯಕ್ಷ ರಿಚರ್ಡ್ ನಿಕ್ಸನ್‌ಗೆ ವಾಟರ್‌ಗೇಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷಮಾದಾನ ನೀಡಿದರು.

ಜನನ

1933: ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕ ರಾಜಾ ಮಹೇಂದ್ರ ಪ್ರತಾಪ್ ಸಿಂಗ್

# 2026ನೇ ಸಾಲಿನ ಮಾಣಿಕ್ಯ ಪ್ರಕಾಶನದ ವಾರ್ಷಿಕ ದತ್ತಿ ಪ್ರಶಸ್ತಿ ಪ್ರಕಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಣಿಕ್ಯ ಪ್ರಕಾಶನ ಕಳೆದ ಒಂದು ದಶಕಗಳಿಂದ ಕೊಡಮಾಡುತ್ತಾ ಬಂದಿರುವ ಕನ್ನಡ ಸಾಹಿತ್ಯದ ವಿವಿಧ ಹದಿಮೂರು ಪ್ರಕಾರಗಳಿಗೆ 28 ಕೃತಿಗಳು ಪ್ರಶಸ್ತಿಗೆ ಭಾಜನವಾಗಿವೆ ಎಂದು ಪ್ರಕಾಶಕಿ ದೀಪಾ ಉಪ್ಪಾರ್ ತಿಳಿಸಿದ್ದಾರೆ.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್, ಗೌರವಾಧ್ಯಕ್ಷ ರಂಜಾನ್ ದರ್ಗಾ, ಮಹಾರಾಷ್ಟ ರಾಜ್ಯಾಧ್ಯಕ್ಷ ಡಾ. ವಿಶ್ವೇಶ್ವರ ಎನ್. ಮೇಟಿ, ಮಹಾರಾಷ್ಟ ರಾಜ್ಯ ಗೌರವಾಧ್ಯಕ್ಷ ಡಾ. ಅಮರೇಶ ಪಾಟೀಲ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ಎಚ್.ಕೆ.ಹಸೀನಾ, ನಾಡಿನ ಪ್ರಸಿದ್ಧ ಸಾಹಿತಿ ಎನ್. ಶೈಲಜಾ ಹಾಸನ, ಸಾಹಿತಿಗಳಾದ ಶಿವಲೀಲಾ ಹುಣಸಗಿ, ಎ.ಎ.ದರ್ಗಾ ಅವರನ್ನೊಳಗೊಂಡ ಆಯ್ಕೆ ಸಮಿತಿ ರಾಜ್ಯ ಹಾಗೂ ನೆರೆ ರಾಜ್ಯಗಳಿಂದ ಆಹ್ವಾನಿತ ಸುಮಾರು ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ಅವಲೋಕಿಸಿ ಪ್ರತಿ ದತ್ತಿ ಪ್ರಶಸ್ತಿಗೆ ತಲಾ ಎರಡು ಕೃತಿಗಳಿಗೆ ಹಂಚಿಕೆ ಮಾಡಿ 13 ಪ್ರಕಾರಗಳಿಗೆ 28 ಕೃತಿಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ ಕೃತಿ ಕತೃಗಳಿಗೆ ಪ್ರಕಾಶನ 2026 ಅ. 11ರ ಭಾನುವಾರ ನಗರದ ಸಂಸ್ಕೃತ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿರುವ 11ನೇ ವರ್ಷದ ವಾರ್ಷಿಕೋತ್ಸವ ಹಾಗೂ ರಾಜ್ಯ ಮಟ್ಟದ ಕವಿ ಕಾವ್ಯ ಸಂಭ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಲಲಿತ ಪ್ರಬಂಧ ಪ್ರಕಾರಕ್ಕೆ ಕೊಡಮಾಡುವ ಪ್ರಸಿದ್ಧ ಸಾಹಿತಿ ಎನ್. ಶೈಲಜಾ ಹಾಸನ ದತ್ತಿ ಪ್ರಬಂಧ ಮಾಣಿಕ್ಯ ಪ್ರಶಸ್ತಿಗೆ ಉತ್ತರ ಕನ್ನಡ ಜಿಲ್ಲೆಯ ಸುಚಿತ್ರಾ ಹೆಗಡೆಯವರ ‘ಮಿಂಚು ಹುಳದ ದಾರಿ’ ಹಾಗೂ ಬೆಳಗಾವಿಯ ಜ್ಯೋತಿ ಬದಾಮಿಯವರ ‘ಕುಂಬಳಕಾಯಿ ಕಳ್ಳ ಅಂದ್ರೆ’ ಕೃತಿಗಳು ಆಯ್ಕೆಯಾಗಿವೆ.

ಕಾವ್ಯ ಪ್ರಕಾರಕ್ಕೆ ಕೊಡಮಾಡುವ ದಿ. ಸಿ.ಪಿ. ನಾರಾಯಣಚಾರ್ಯ ಸ್ಮಾರಕ ದತ್ತಿ ಕಾವ್ಯ ಮಾಣಿಕ್ಯ ಪ್ರಶಸ್ತಿಗೆ ಬೆಂಗಳೂರಿನ ಡಾ. ಶೈಲೇಶ್ ಕುಮಾರ್ ಅವರ ‘ರಿಯಾಯಿತಿ ದರದ ಬುದ್ಧ’, ಬೆಳಗಾವಿಯ ಶೋಭಾ ನಾಯಕರವರ ‘ಅರ್ಧ ಮುಖಗಳ ಶಹರು’, ಕೊಪ್ಪಳದ ಶರಣಪ್ಪ ತಳ್ಳಿ ಕುಪ್ಪಿಗುಡ್ಡರವರ ‘ನಾಕು ತಾವಿನ ತಿರುವು’, ಉತ್ತರ ಕನ್ನಡದ ವನರಾಗಶರ್ಮ ಅವರ ‘ಕೊಳಲನೇಕೆ ನುಡಿಸದಿರುವೆ’ ಕೃತಿಗಳು ಆಯ್ಕೆಯಾಗಿವೆ.

ಸಂಶೋಧನಾ ವಿಭಾಗಕ್ಕೆ ಕೊಡಮಾಡುವ ದಿ. ನಿಂಗಪ್ಪ ಮಲ್ಲಪ್ಪ ಮೇಟಿ ಸ್ಮಾರಕ ದತ್ತಿ ಸಂಶೋಧನಾ ಮಾಣಿಕ್ಯ ಪ್ರಶಸ್ತಿಗೆ ಮುಂಬಯಿಯ ಡಾ. ದುರ್ಗಪ್ಪ ಕೋಟಿಯವರ್ ಅವರ ‘ಮುಂಬಯಿ ಕನ್ನಡ ಗದ್ಯ ವಾಹಿನಿ’, ರಾಯಚೂರಿನ ಈರಣ್ಣ ಬೆಂಗಾಲಿಯವರ ‘ನಮ್ಮ ರಾಯಚೂರು’ ಕೃತಿಗಳು ಆಯ್ಕೆಯಾಗಿವೆ.

ವಚನ ಸಾಹಿತ್ಯ ವಿಭಾಗಕ್ಕೆ ಕೊಡಮಾಡುವ ದಿ. ದೊಡ್ಡಚಂದಪ್ಪ ತಳ್ಳಿ ಪಾಟೀಲ ಸ್ಮಾರಕ ದತ್ತಿ ವಚನ ಮಾಣಿಕ್ಯ ಪ್ರಶಸ್ತಿಗೆ ಹಾವೇರಿ ಜಿಲ್ಲೆಯ ಡಾ. ಪುಷ್ಪಾವತಿ ಶಲವಡಿಮಠರವರ ‘ಅನುಭಾವ ದೀಪ್ತಿ’, ಕೊಪ್ಪಳ ಜಿಲ್ಲೆಯ ಗೀತಾ ಮಲ್ಲನಗೌಡರವರ ‘ವಚನ ಸಿರಿ’ ಕೃತಿಗಳು ಆಯ್ಕೆಯಾಗಿವೆ.

ನಾಟಕ ವಿಭಾಗಕ್ಕೆ ಕೊಡಮಾಡುವ ಪ್ರಭಾವತಿ ಶೆಡ್ತಿ ದತ್ತಿ ನಾಟಕ ಮಾಣಿಕ್ಯ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಗಣೇಶ ಅಮೀನಗಡ ಅವರ ‘ಬಂಗಾರದ ಮನುಷ್ಯ’, ಧಾರವಾಡ ಜಿಲ್ಲೆಯ ವಿನುತಾ ಹಂಚಿನಮನಿ ಅವರ ‘ಅಪರಾಜಿತೆಯರು’ ಕೃತಿಗಳು ಆಯ್ಕೆಯಾಗಿವೆ.

ಕಾದಂಬರಿ ವಿಭಾಗಕ್ಕೆ ಕೊಡಮಾಡುವ ದಿ. ಫೆಲಿಕ್ಸ್ ಅಲ್ಬುಕರ್ಕ್ ಮಂಡತ್ಯಾರ್ ಸ್ಮಾರಕ ದತ್ತಿ ಕಾದಂಬರಿ ಮಾಣಿಕ್ಯ ಪ್ರಶಸ್ತಿಗೆ ಬೆಳಗಾವಿ ಜಿಲ್ಲೆಯ ರಂಜಿತಾ ವಿಕ್ರಮ ಮಹಾಜನರವರ ‘ಅವಳೇ ನನ್ನ..’, ಹಾವೇರಿ ಜಿಲ್ಲೆಯ ರವೀಂದ್ರ ಮುದ್ದಿಯವರ ‘ಗಾಡ್ ಈಸ್ ನಾಟ್ ರೀಚಬಲ್’ ಕೃತಿಗಳು ಆಯ್ಕೆಯಾಗಿವೆ.

ಗಜಲ್ ವಿಭಾಗಕ್ಕೆ ಕೊಡಮಾಡುವ ದಿ. ಫಾತಿಮಾ ಜನಾಬ್ ಸೈಯದ್ ಅಬ್ದುಲ್ ಘನೀ ಸಾಬ್ ಸ್ಮಾರಕ ದತ್ತಿ ಗಜಲ್ ಮಾಣಿಕ್ಯ ಪ್ರಶಸ್ತಿಗೆ ಹಾವೇರಿ ಜಿಲ್ಲೆಯ ಲಕ್ಷ್ಮಿಕಾಂತ್ ಮಿರಜಕರ ಅವರ ‘ಖಾಲಿ ಜೋಳಿಗೆಯ ಫಕೀರ’, ಧಾರವಾಡ ಜಿಲ್ಲೆಯ ಡಾ. ರೇಣುಕಾತಾಯಿ ಸಂತ ಬಾ ಅವರ ‘ದಿಲ್‌ಕಶ್ ಗಜಲ್’ ಕೃತಿಗಳು ಆಯ್ಕೆಯಾಗಿವೆ.

ಕಥಾ ವಿಭಾಗಕ್ಕೆ ಕೊಡಮಾಡುವ ಕೊಣನೂರು ಅಣ್ಣಯ್ಯ ದತ್ತಿ ಕಥಾ ಮಾಣಿಕ್ಯ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಎಂ.ಡಿ. ಚಿತ್ತರಗಿ ಅವರ ‘ಚಟ್ಟದ ಬಿಕ್ಕು’, ಗದಗ ಜಿಲ್ಲೆಯ ಡಾ. ಉಮೇಶ ತಿಮ್ಮಾಪುರ ಅವರ ‘ಕಗ್ಗಲ್ಲ ಕ್ರಾಸ್’ ಕೃತಿಗಳು ಆಯ್ಕೆಯಾಗಿವೆ.

ಚುಟುಕು ಸಾಹಿತ್ಯ ವಿಭಾಗಕ್ಕೆ ಕೊಡಮಾಡುವ ಕೆ. ವೈ. ಕಂದಕೂರ ದತ್ತಿ ಚುಟುಕು ಮಾಣಿಕ್ಯ ಪ್ರಶಸ್ತಿಗೆ ಮಂಡ್ಯ ಜಿಲ್ಲೆಯ ನಂದಾದೀಪ ಅವರ ‘ರಾತ್ರಿ ಸುರಿದ ಮಲ್ಲಿಗೆ’, ಕೊಪ್ಪಳ ಜಿಲ್ಲೆಯ ಜಯಶ್ರೀ ಹಕ್ಕಂಡಿಯವರ ‘ಮಿಣುಕು ದೀಪಗಳು’ ಕೃತಿಗಳು ಆಯ್ಕೆಯಾಗಿವೆ.

ವಿಮರ್ಶಾ ವಿಭಾಗಕ್ಕೆ ಕೊಡಮಾಡುವ ಕುಂದೂರು ಜಯಪದ್ಮ ಧರಣೇಂದ್ರರಾಜ್ ದತ್ತಿ ವಿಮರ್ಶಾ ಮಾಣಿಕ್ಯ ಪ್ರಶಸ್ತಿಗೆ ಶಿವಮೊಗ್ಗ ಜಿಲ್ಲೆಯ ಡಾ. ಜಿ.ಎಸ್. ಅಶೋಕ ಅವರ ‘ಡಾ. ಜಿ.ಎಸ್.ಶಿವರುದ್ರಪ್ಪ ಮತ್ತು ಚನ್ನವೀರ ಕಣವಿಯವರ ಕಾವ್ಯದಲ್ಲಿನ ಕಾವ್ಯ ಮೀಮಾಂಸೆ ಮತ್ತು ತೌಲನಿಕ ವಿವೇಚನೆ’, ವಿಜಯಪುರ ಜಿಲ್ಲೆಯ ಹರೀಶ ಟಿ.ಜಿ. ಅವರ ‘ಹೊಳೆದದ್ದೇ ತಾರೆ’ ಕೃತಿಗಳು ಆಯ್ಕೆಯಾಗಿವೆ.

ಮಕ್ಕಳ ಸಾಹಿತ್ಯ ವಿಭಾಗಕ್ಕೆ ಕೊಡಮಾಡುವ ದಿ. ರಾಮಣ್ಣ ಸುಬ್ಬಣ್ಣ ಹುಣಸಗಿ ದತ್ತಿ ಶಿಶು ಮಾಣಿಕ್ಯ ಪ್ರಶಸ್ತಿಗೆ ಶಿವಮೊಗ್ಗ ಜಿಲ್ಲೆಯ ಕೃಪಾ ಬಿ.ಎಂ. ಅವರ ‘ಮಕ್ಕಳ ಮ್ಯಾಜಿಕ್’, ಮಮತಾ ಅರಸೀಕೆರೆ ಅವರ ‘ಗೂಡು ಸೇರಿದ ಹಕ್ಕಿಗಳು’ ಕೃತಿಗಳು ಆಯ್ಕೆಯಾಗಿವೆ.

# ಕೆಆರ್‌ಎಸ್ ಪಕ್ಷದ ಮೂವರ ವಿರುದ್ಧ ಎಫ್‌ಐಆರ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ತವ್ಯಕ್ಕೆ ಅಡ್ಡಿಪಡಿಸಿ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಕೆಆರ್‌ಎಸ್ ಪಕ್ಷದ ಮೂವರ ವಿರುದ್ಧ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊರಗುತ್ತಿಗೆ ಸಿಬ್ಬಂದಿ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಕೆಆರ್‌ಎಸ್‌ನ ಮಧು, ರಮೇಶ ಹಾಗೂ ನಿರಂಜನ ಎಂಬುವವರ ವಿರುದ್ಧ ಹಿಮ್ಸ್ ಭದ್ರತಾ ಸಿಬ್ಬಂದಿ ಜ್ಯೋತಿ ಹಾಗೂ ತೇಜಾ ಅವರು ದೂರು ನೀಡಿದ್ದಾರೆ. ಆ. 23ರಂದು ಆಸ್ಪತ್ರೆಯ ಹಳೇ ಕಟ್ಟಡದ ಹಾಜರಾತಿ ಕೊಠಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಏಕಾಏಕಿ ನುಗ್ಗಿದ ಪಕ್ಷದ ಕಾರ್ಯಕರ್ತರು ಏಜನ್ಸಿಯ ಕ್ಷೇತ್ರ ಅಧಿಕಾರಿ ಮಹೇಶ್ ಅವರನ್ನು ಈ ತಕ್ಷಣ ಕರೆಸುವಂತೆ ಒತ್ತಾಯಿಸಿ ಒಳಗಡೆಯಿಂದ ಬಾಗಿಲು ಹಾಕಿದರು ಮತ್ತು ಕೆಲಸಕ್ಕೆ ಅಡ್ಡಿಪಡಿಸಿದರು. ವಿನಾಕಾರಣ ನಮ್ಮ ಸಿಬ್ಬಂದಿಯ ವಿಡಿಯೊ ಚಿತ್ರೀಕರಣ ಮಾಡಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಹಾಜರಾತಿ ಪುಸ್ತಕ ಸೇರಿ ಇತರ ದಾಖಲೆಗಳನ್ನು ನೀಡುವಂತೆ ಒತ್ತಾಯಿಸಿದ್ದಾರೆ. ಅವರ ವರ್ತನೆಯಿಂದ ನಮಗೆ ಮಾನಸಿಕ ಹಿಂಸೆ ಉಂಟಾಗುತ್ತಿದ್ದು ಕ್ರಮ ಜರುಗಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248